## ಮಿಲಿಟೇರಿ ಇಲಾಖಾ.

### ಇಸ್ತಿಹಾರ್ ನಾಮಾ.

ತಾರೀಖು 12ನೇ ಮಾಹೆ ಆಗಸ್ಟ್ ಸ್ರ್ 1884ನೇ ಇಸವಿ, ಮೊಕ್ಕಾಂ ಬೆಂಗಳೂರು.

ಸವಾರ್ ಮತ್ತು ಬಾರ್ ಇಲಾಖಾ ನೌಕರಿಯಲ್ಲಿ ದಾಖಲಾಗತಕ್ಕದ್ದಕ್ಕಾಗಿ ಮಿಲಿಟೇರಿ ಸಿಕ್ರಟೇರೀ ಸಾಹೆಬರವರ ಆಫೀಸಿನಲ್ಲಿ ರಿಜಿಸ್ಟರ್ ಆಗಿರತಕ್ಕ ವಿಶಿಷ್ಟ ವುಮೇದವಾರರುಗಳೂ ಇಂತಿರ್ಹಾ ಬಗ್ಯೆ ಈ ಕೆಳಗೆ ನಮೂದಿಸಿರುವ ಸ್ಥಳಗಳು ಮತ್ತು ತಾರೀಖುಗಳಲ್ಲಿ ಹಾಜರಾಗತಕ್ಕದ್ದು, ಆಗ್ಯೆ ಅವರ ಹಕ್ಕುದಾರಿ ಬೂಬ್ ವೆವಸ್ಥೆ ಮಾಡಲಾಧೀತು.

ಹಾಗೆ ಸದರೀ ತಾರೀಖುಗಳಲ್ಲಿ ಹಾಜರಾಗಲು ತಪ್ಪುವ ಯಲ್ಲಾ ವುಮೇದವಾರರುಗಳ ಹೆಸರುಗಳೂ ರಿಜಸ್ಟರಿನಿಂದ ತೆಗದು ಹಾಕಲ್ ಪಡುತ್ತೆ.

| ಸ್ಥಳ. | ತಾರೀಖು. |
|---|---|
| 1 ಬೆಂಗಳೂರು.<br>ಮಿಲಿಟೇರಿ ಸೆಕ್ರಿಟೇರೀ ಸಾಹೆಬರವರ ಆಫೀಸು | ಸವಾರ್ ವುಮೇದ್‌ವಾರು.<br>8ನೇ ಸಪ್ಟೆಂಬರ್ ಸ್ರ್ 1884ನೇ ಇಸವಿ, ಸೋಮುವಾರ.<br>ಬಾರ್ ವುಮೇಧವಾರು.<br>9ನೇ ಸಪ್ಟೆಂಬರ್ ಸ್ರ್ 1884ನೇ ಇಸವಿ, ವುಂಗಳವಾರ. |
| 2 ಮೈಸೂರು.<br>ಮಿಲಿಟೇರಿ ಸೆಕ್ರಿಟೇರಿ ಸಾಹೆಬರವರ ಕ್ಯಾಂಪ್ ಆಫೀಸು. | ಸವಾರ್ ವುಮೇದ್‌ವಾರು.<br>1ನೇ ಅಕ್ಟೋಬರ್ ಸ್ರ್ 1884ನೇ ಇಸವಿ, ಬುಧವಾರ.<br>ಬಾರ್ ವುಮೇದ್‌ವಾರು.<br>2ನೇ ಅಕ್ಟೋಬರ್ ಸ್ರ್ 1884ನೇ ಇಸವಿ, ಗುರುವಾರ. |

ಎ. ಸಿ. ಹೇ, ಕರ್ನಲ್,
ಆ|| ಮಿಲಿಟೇರೀ ಸೆಕ್ರಿಟೇರಿ.

## ರೇಯಿಲ್‌ವೆ.

### ಇಸ್ತಿಹಾರ್‌ನಾಮಾ.

ತಾರೀಖು 22ನೇ ಆಗಸ್ಟ್ 1884.

ಮೈಸೂರು ಸ್ಟೇಟ್ ರೇಯಿಲ್‌ವೆ ಅಸಿಸ್ಟೆಂಟ್ ಟ್ರಾಫಿಕ್ ಸೂಪರ್‌ಟೆಂಡೆಂಟರಾದ ವೆ|| ಕೆ. ಪಿ. ಪುಟ್ಟಣ್ಣಶೆಟ್ಟಿಯವರು, 1884ನೇ ಇಸವಿ ಆಗಸ್ಟ್ 20ನೇ ಮಕ್ಕಂ ಲಾಗಾಯತು; ಟ್ರಾಫಿಕ್ ಸೂಪ್ರಿಟೆಂಡೆಂಟ್ ಕೆಲಸಕ್ಕೆ ಬಡ್ತೀ ಮಾಡಲ್ಪಟ್ಟಿರುತ್ತಾರೆ, ಮತ್ತು ಅವರ ತಲಬ್ ಸದರೀ ಮಾಹೆ 11ನೇ ಮಕ್ಕಂ ಲಾಗಾಯತು ರೂಪಾಯಿ 250ಕ್ಕೆ ಇಜ್ಞಾಫೆ ಮಾಡಿರುತ್ತೆ.

ಮೈಸೂರು ಸ್ಟೇಟ್ ರೇಯಿಲ್‌ವೆ ಆಡೀಟರಾದ ವೆ|| ಸೆಂಟ್ ಜಾರ್ಜ್ ಬೂರ್ಕ್ ಯವರು, 1884ನೇ ಇಸವಿ ಆಗಸ್ಟ್ 11ನೇ ಮಕ್ಕಂ ಲಾಗಾಯತು ಮಾಹೆಯಾನಾ 250 ರೂಪಾಯಿಗೆ ಬಡ್ತೀಮಾಡಲ್ಪಟ್ಟಿರುತ್ತಾರೆ.

ಬಮೋಜೀಬ್ ಹುಕ್ಕುಂ,
ಪಿ. ರೀಡ್ ಬೀಚರ್,
ಸೆಕ್ರಿಟೇರಿ, ರೇಯಿಲ್‌ವೆ ಇಲಾಖಾ.